

# ಛಲಕ್ಕೆ ಮತ್ತೊಂದು ಹೆಸರು

# ಸೈನಾ ನೆಹ್ವಾಲ್

■ ಗಿರೀಶ ದೊಡ್ಡಮನಿ



ಸೈನಾ ನೆಹ್ವಾಲ್ ಮತ್ತು ಪತಿ ಪಿ. ಕಶ್ಯಪ್

ಹರಿಯಾಣದ ಹಿಸ್ಸಾರ್ ನಗರದಲ್ಲಿ ಎಲ್ಲಿ ನೋಡಿದರೂ ಕುಸ್ತಿ, ಕಬಡ್ಡಿ ಆಟಗಾರರು ಕಾಣಸಿಗುತ್ತಾರೆ. ಈ ಕ್ರೀಡೆಗಳಿಗೆ ತರಬೇತಿ ಕೇಂದ್ರಗಳೂ ಇಲ್ಲಿ ಬೇಕಾದಷ್ಟಿವೆ. ಆದರೆ ಈ ವಾತಾವರಣದಲ್ಲಿ ಬ್ಯಾಡ್ಮಿಂಟನ್ ಆಟಗಾರ್ತಿಯಾಗುವತ್ತ ಒಲವು ತೋರಿದ ಹುಡುಗಿಯ ಕತೆ ಇದು.

ಅಪ್ಪ, ಅಮ್ಮನ ಬ್ಯಾಡ್ಮಿಂಟನ್ ಪ್ರೀತಿಯೇ ಆ ಬಾಲಕಿ ಬ್ಯಾಡ್ಮಿಂಟನ್ ರ‍್ಯಾಕೆಟ್ ಕೈಗೆತ್ತಿಕೊಳ್ಳಲು ಕಾರಣವಾಯಿತು. ಆ ಹುಡುಗಿಯಿಂದಲೇ ಮುಂದೆ ಭಾರತಕ್ಕೆ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪ್ರಥಮ ಪದಕವನ್ನು ಗೆದ್ದುಕೊಟ್ಟ ಸಾಧನೆ ದಾಖಲಾಯಿತು. ಆ ಹುಡುಗಿಯೇ ಸೈನಾ ನೆಹ್ವಾಲ್. 2012ರ ಲಂಡನ್ ಒಲಿಂಪಿಕ್ ಕೂಟದಲ್ಲಿ ಅವರು ಕಂಚು ಗೆದ್ದರು. ಅವರ ನಂತರ ಪಿ.ವಿ. ಸಿಂಧು ಎರಡು ಒಲಿಂಪಿಕ್ ಕೂಟಗಳಲ್ಲಿ (2016 ರಿಯೊ ಡಿಜನ್ಯೆರೊ ಮತ್ತು 2020 ಟೋಕಿಯೊ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದ ಸಾಧನೆ ಮಾಡಿದರು. ಭಾರತದ ಕ್ರೀಡಾಲೋಕದ ಈ ಇಬ್ಬರೂ ಕಣ್ಮಣಿಗಳು ಹೈದರಾಬಾದಿನ ಗೋಪಿಚಂದ್ ಅಕಾಡೆಮಿಯಲ್ಲಿ ತರಬೇತಿ ಪಡೆದು ಬೆಳೆದವರು ಎಂಬುದು ವಿಶೇಷ.

ಭಾರತದಲ್ಲಿ ಮಹಿಳೆಯರ ಬ್ಯಾಡ್ಮಿಂಟನ್ ಕ್ಷೇತ್ರವನ್ನು ದಿಗಂತಕ್ಕೆ ವಿಸ್ತರಿಸಿದ ಶ್ರೇಯ ಅವರದ್ದು. ಅವರ ಕುರಿತ ಬಯೋಪಿಕ್ ಕೂಡ ಹೆಸರು ಮಾಡಿತ್ತು. ಅವರ ಕುರಿತ ‘ಪ್ಲೇಯಿಂಗ್ ಟು ವಿನ್’ ಕೃತಿಯು ಯುವಸಮುದಾಯಕ್ಕೆ ಪ್ರೇರಣೆ ನೀಡುವ ಕಥಾನಕ. ಸುಮಾರು ಎರಡು ದಶಕಗಳ ತಮ್ಮ ಕ್ರೀಡಾ ಪ್ರಯಾಣಕ್ಕೆ ಸೈನಾ ಅವರು ಈಗ ವಿರಾಮ ನೀಡಿದ್ದಾರೆ. ಎಡೆಬಿಡದೇ ಕಾಡಿದ ಮೊಣಕಾಲು